11ನೇ ತರಗತಿಗಳನ್ನು ಸ್ಕಿಪ್ ಮಾಡಿ, 15ನೇ ವಯಸ್ಸಿಗೇ ಪದವಿ ಪಡೆದ ಜಾಣ. ಅವನ ಐಕ್ಯೂ 167ಕ್ಕಿಂತ ಹೆಚ್ಚಿತ್ತು (ನಮ್ಮಲ್ಲಿ 130ರ ಆಸುಪಾಸಿನ ಐಕ್ಯೂ ಇದ್ದವರೇ ಜಾಣ ಎನ್ನಿಸಿಕೊಳ್ಳುತ್ತಾರೆ). ಓದುವ ಅವಧಿಯಲ್ಲಿ ಆತ ತನಗಿಂತ ಹಿರಿಯ ವಿದ್ಯಾರ್ಥಿಗಳಿಂದ ಹಿಂಸೆಗೆ ಗುರಿಯಾಗಿದ್ದ. ಪ್ರೌಢಹಂತದಲ್ಲಿ ರಾಷ್ಟ್ರೀಯ ಅರ್ಹತೆ ಪಡೆದ ಐದು ವಿದ್ಯಾರ್ಥಿಗಳಲ್ಲಿ ಟೆಡ್ ಒಬ್ಬನಾಗಿದ್ದ. 1967ರಲ್ಲಿ ಟೆಡ್ ಪ್ರಕಟಿಸಿದ 'ಬೌಂಡರಿ ಫಂಕ್ಷನ್' ಎಂಬ ಪ್ರೌಢ ಪ್ರಬಂಧವು ಮಿಚಿಗನ್‌ನ ಅತ್ಯಂತ ಶ್ರೇಷ್ಠ ಪ್ರಬಂಧ ಎಂಬ ಹೆಗ್ಗಳಿಕೆಯೊಂದಿಗೆ ಬಹುಮಾನ ಪಡೆದುಕೊಂಡಿತು. ಕಮಿಟಿಯ ಸದಸ್ಯ ಮ್ಯಾಕ್ಸ್‌ವೆಲ್ ರೆಡೆ ಪ್ರಕಾರ, ದೇಶದ ಪ್ರತಿಭಾವಂತ 1012 ಗಣಿತಜ್ಞರು ಮಾತ್ರ ಅರ್ಥೈಸಿಕೊಳ್ಳಬಹುದಾದ ಕ್ಲಿಷ್ಟಕರ ಸಂಗತಿಗಳು ಆ ಪ್ರಬಂಧದಲ್ಲಿದ್ದವು.



ಟೆಡ್‌ಗೆ ಕಾಡಿನಲ್ಲಿ ಆಸರೆ ನೀಡಿದ್ದ ಪುಟ್ಟ ಶೆಡ್

ತನ್ನ 25ನೇ ವಯಸ್ಸಿನಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಗಣಿತ ಸಹಾಯಕ ಪ್ರಾಧ್ಯಾಪಕನಾಗಿ ಟೆಡ್ ವೃತ್ತಿ ಆರಂಭಿಸಿದ. ಯಾಕೋ ಅವನು ತನ್ನ ವೃತ್ತಿಯಿಂದ ಸಂತುಷ್ಟನಾಗಿರಲಿಲ್ಲ. ಸದಾಕಾಲ ತಂತ್ರಜ್ಞಾನದ ಕರಾಳ ಸಾಧ್ಯತೆಗಳ ಬಗೆಗೆ ಚಿಂತಿಸುತ್ತಿದ್ದ. ಮುಂದೊಂದು ದಿನ ಇವೆಲ್ಲ ತಂತ್ರಜ್ಞಾನಗಳು ಮನುಷ್ಯನ ಅಸ್ತಿತ್ವವನ್ನೇ ಮುಗಿಸಿಬಿಡುತ್ತವೆ ಎಂಬ ಗುಂಗಿನಲ್ಲಿದ್ದ. ಅಂಕುಶವಿಲ್ಲದ ತಂತ್ರಜ್ಞಾನಕ್ಕೆ ಹೇಗೆ ಅಂಕುಶ ಹಾಕಬೇಕು ಅನ್ನುವುದರ ಬಗ್ಗೆ ತನ್ನದೇ ಪರಿಕಲ್ಪನೆಯನ್ನು ಬೆಳೆಸಿಕೊಳ್ಳತೊಡಗಿದ. ಇದ್ದಕ್ಕಿದ್ದಂತೆ ತನ್ನ ಕೆಲಸಕ್ಕೆ ರಾಜೀನಾಮೆ ನೀಡಿ ಕಾಡಿನಲ್ಲಿ ವಾಸಿಸತೊಡಗಿದ.

ಚಿಕ್ಕ ಗುಡಿಸಲನ್ನು ಕಟ್ಟಿಕೊಂಡ. ವಾರಾಂತ್ಯದಲ್ಲಿ ಬೈಸಿಕಲ್‌ನಲ್ಲಿ ಪೇಟೆಗೆ ಹೋಗಿ ತನಗೆ ಬೇಕಾದ ಕನಿಷ್ಠ ದಿನಸಿಯನ್ನು ಕೊಂಡುತರುತ್ತಿದ್ದ. ಇಂಟರ್‌ನೆಟ್ ಹಾಗಿರಲಿ, ಕಂಪ್ಯೂಟರ್ ಕೂಡ ಇಲ್ಲದ ಆ ದಿನಗಳಲ್ಲಿ ಅವನು ತನ್ನ ಗೂಡಿನಲ್ಲಿ ಕುಳಿತೇ 'ಔದ್ಯಮಿಕ ಸಮಾಜದ ಅಪಾಯಗಳು' ಎಂಬ ಪ್ರಬಂಧವನ್ನು ಬರೆದ. ಆದರೆ, ಅದನ್ನು ಪ್ರಕಟಿಸಲು ಯಾವ ಪತ್ರಿಕೆಯೂ ಒಪ್ಪಲಿಲ್ಲ. ಅಲ್ಲಿಂದ ಆತ ಹಿಂಸಾಕೃತ್ಯಕ್ಕಿಳಿದ. ಅವನ ಅನಾಗರಿಕ ಮತ್ತು ಭಯೋತ್ಪಾದಕ ಕೃತ್ಯಗಳು ಪ್ರಾರಂಭವಾದವು. ನಾಡಬಾಂಬ್ ತಯಾರಿಸಿ, ತೆರೆದ ಕೂಡಲೇ ಸ್ಫೋಟಗೊಳ್ಳುವಂತೆ ಪಾರ್ಸಲ್‌ಗಳನ್ನು ರೂಪಿಸಿ ಅಂಚೆಯ ಮೂಲಕ ಗಣ್ಯರಿಗೆ ರವಾನಿಸತೊಡಗಿದ. ತಂತ್ರಜ್ಞಾನ ಬೆಳವಣಿಗೆಯ ರೂವಾರಿಗಳಿಗೆ, ವಿಶ್ವವಿದ್ಯಾಲಯಗಳ ವಿದ್ವಾಂಸರಿಗೆ, ಏರ್‌ಲೈನ್ಸ್‌ನ ಪ್ರಮುಖ ಅಧಿಕಾರಿಗಳಿಗೆ ಬಾಂಬ್‌ಗಳನ್ನು ಕಳಿಸತೊಡಗಿದೆ. ಪ್ರತಿ ಬಾಂಬ್ ಸ್ಫೋಟವಾದಾಗಲೂ ಸಾವುನೋವು.

ಅಮೇರಿಕದ 'ಎಫ್.ಬಿ.ಐ.' (ನಮ್ಮ ಸಿಬಿಐ ಮಾದರಿಯ ಪತ್ತೆ ಸಂಸ್ಥೆ) ತನಿಖೆ ಆರಂಭಿಸಿತು. ಬಾಂಬ್‌ಗಳು ಎಲ್ಲಿಂದ ಬರುತ್ತಿವೆ, ಯಾರು ಕಳಿಸುತ್ತಿದ್ದಾರೆ ಎಂಬುದು ಗೊತ್ತಾಗದೇ ಪರದಾಡತೊಡಗಿತು. ಅತ್ತ ಮಾಧ್ಯಮಗಳ ಗಲಾಟೆಯೂ ಜೋರಾಯಿತು. ಹತಾಶ 'ಎಫ್. ಬಿ.ಐ.' ಅವನಿಗೆ 'ಯುನಾಬಾಮ್' ಎಂಬ ಕಾಲ್ಪನಿಕ ಹೆಸರನ್ನು ಕೊಟ್ಟಿತು. (**UNABOM, University and Airline Bomber**).

ಯುನಾಬಾಂಬರ್ ಎಂತಲೇ ಆತನ ಹೆಸರು ಮಾಧ್ಯಮಗಳ ಮೂಲಕ ಜನಜನಿತವಾಯಿತು. 'ಎಫ್.ಬಿ.ಐ.'ನ 150 ಅಧಿಕಾರಿಗಳು ಪರದಾಡುತ್ತಿರುವಾಗ, ಟೆಡ್ ಕಳಿಸಿದ 16 ಬಾಂಬ್‌ಗಳು ಮೂವರನ್ನು ಬಲಿ ಪಡೆದಿದ್ದವು, 23 ಜನರನ್ನು ಗಂಭೀರವಾಗಿ ಗಾಯಗೊಳಿಸಿದ್ದವು.

ಆತ ತಯಾರಿಸಿದ ಎಲ್ಲ ಬಾಂಬ್‌ಗಳೂ ಒಂದಕ್ಕಿಂತ ಒಂದು ಭಿನ್ನವಾಗಿದ್ದವು. ಬೇರೆ ಬೇರೆ ಊರುಗಳಿಂದ ಅವು ರವಾನೆಯಾಗಿದ್ದವು.



ಟೆಡ್‌ನ ಪ್ರತಿಪಾದನೆಗಳಿಗೆ ಈಗ ಜನಬೆಂಬಲ ದೊರೆತಿದೆ